## ಅಧಿಕ ಜಿಲ್ಲಾ ಮತ್ತು ವಿಶೇಷ  ನ್ಯಾಯಾಲಯ  ಹಾಸನ ಇವರಲ್ಲಿ

## ಸ್ಪೇಷಲ್.ಸಿ ನಂಃ  425/2023

ಪಿರ್ಯಾದಿಃ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿ
ಆರಕ್ಷಕ  ಉಪ ಆಧೀಕ್ಷಕರು
ಹೊಳೆನರಸೀಪುರ ಉಪ ವಿಭಾಗ.

ವಿರುದ್ಧ

ಆರೋಪಿತರುಃ 1. ವಿಶ್ವನಾಥ ಬಿನ್ ಸ್ವಾಮಿಗೌಡ,
ವಯಸ್ಸುಃ 25 ವರ್ಷ
ವಾಸಃ ಗೊರವನಹಳ್ಳಿ ಗ್ರಾಮ,
ಕಸಬಾ ಹೋಬಳಿ,
ಅರಕಲಗೂಡು ತಾಲ್ಲೂಕು.

## ದೋಷಾರೋಪಣೆ

ಶ್ರೀಮತಿ ಶೈಲಾ, ಎಂ.ಕಾಂ  ಎಲ್.ಎಲ್.ಎಮ್., ಅಧಿಕ ಸತ್ರ ಹಾಗೂ  ವಿಶೇಷ ನ್ಯಾಯಾಧೀಶರು, ಹಾಸನ ಆದ ನಾನು ಮೇಲ್ಕಂಡ ಆರೋಪಿತರಾದ  ನಿಮ್ಮ ವಿರುದ್ಧ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸುತ್ತೇನೆ.

ದಿನಾಂಕಃ 14.10.2018 ರಂದು ರಾತ್ರಿ 7.30 ಗಂಟೆಗೆ ಅಂಕನಾಯಕನಹಳ್ಳಿಕಾವಲು ಗ್ರಾಮದ ದೇವಮ್ಮ ದೇವಸ್ಥಾನದ ಹತ್ತಿರ ರಸ್ತೆಯಲ್ಲಿ 1ನೇ ಆರೋಪಿಯಾದ ನೀವು 2 ಮತ್ತು 3ನೇ ಆರೋಪಿತರ ಜೊತೆ ಸೇರಿ ಸಮಾನ ಉದ್ದೇಶದಿಂದ  ಆರೋಪಿ 1 ಮತ್ತು 2 ರವರು ಚಾಸಾ-1 ರವರನ್ನು ಮುಂದೆ ಹೋಗದಂತೆ ತಡೆದು ನಿಲ್ಲಿಸಿ, ಅಪರಾಧ ಮಾಡುವ ಉದ್ದೇಶದಿಂದ ಭಾರತೀಯ ದಂಡ ಸಂಹಿತೆಯ ಕಲಂಃ 341 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ.

**2.** ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ 1ನೇ ಆರೋಪಿಯಾದ ನೀವು 2 ಮತ್ತು 3ನೇ ಆರೋಪಿತರ ಜೊತೆ ಸೇರಿ ಸಮಾನ ಉದ್ದೇಶದಿಂದ , 1ನೇ ಆರೋಪಿಯಾದ ನೀವು ಚಾಸಾ-1 ರವರಿಗೆ ಕೊಲೆ ಮಾಡುವ ಉದ್ದೇಶದಿಂದ, ತನ್ನ ಕೈಯಲ್ಲಿದ್ದ ಚಾಕುವಿನಿಂದ ಚಾಸಾ-1 ರವರ ಎಡಭಾಗದ ತಲೆಗೆ ಹೊಡೆದು, ಎಡಕಣ್ಣಿಗೆ ರಕ್ತಗಾಯ

ಮಾಡಿ ಭಾರತೀಯ ದಂಡ ಸಂಹಿತೆಯ ಕಲಂಃ 307 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ.

**3.** ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ 1ನೇ ಆರೋಪಿಯಾದ ನೀವು 2 ಮತ್ತು 3ನೇ ಆರೋಪಿತರ ಜೊತೆ ಸೇರಿ ಸಮಾನ ಉದ್ದೇಶದಿಂದ, 1ನೇ ಆರೋಪಿಯಾದ ನೀವು ಚಾಸಾ–1 ರವರಿಗೆ ಕೊಲೆ ಬೆದರಿಕೆ ಹಾಕಿದ್ದು, ಭಾರತೀಯ ದಂಡ ಸಂಹಿತೆಯ ಕಲಂಃ506 ಸಹವಾಚಕ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ.

4. ನಾಲ್ಕನೆಯದಾಗಿ ದಿ. 13.10.2018 ರಂದು ರಾತ್ರಿ ವೇಳೆಯಲ್ಲಿ 1ನೇ ಆರೋಪಿಯಾದ ನೀವು 2 ಮತ್ತು 3ನೇ ಆರೋಪಿತರ ಜೊತೆ ಸೇರಿ ಸಮಾನ ಉದ್ದೇಶದಿಂದ, 2ನೇ ಆರೋಪಿ ಮೊಬೈಲ್‌ನಿಂದ ಚಾಸಾ–1 ರವರು ಪರಿಶಿಷ್ಟ ಜಾತಿಯ ಸದಸ್ಯರೆಂದು ಗೊತ್ತಿದ್ದರೂ ಚಾಸಾ–1 ರವರಿಗೆ ಫೋನ್ ಮಾಡಿ ಅವಾಚ್ಯ ಶಬ್ದಗಳಿಂದ ಬೈದು, ಅವಮಾನಪಡಿಸಿ, 3ನೇ ಆರೋಪಿ ಕೂಡ ಚಾಸಾ–1 ರವರಿಗೆ ಹೊಲೆಯ ಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದು, ಭಾರತೀಯ ದಂಡ ಸಂಹಿತೆಯ ಕಲಂಃ 504ಸಹವಾಚಕ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ.

**5.** ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ, ಆರೋಪಿ 1 ಮತ್ತು 2 ರವರು ಚಾಸಾ1 ರವರಿಗೆ ಚಾಕುವಿನಿಂದ ಎಡಭಾಗದ ತಲೆಗೆ, ಬಲಕೈಗೆ ಹೊಡೆದ ಸಾದಾಗಾಯಪಡಿಸಿ, ಅವಾಚ್ಯ ಶಬ್ದಗಳಿಂದ ಬೈದು ಅವಮಾನಪಡಿಸಿ, ಕೊಲೆ ಬೆದರಿಕೆ ಹಾಕಿ, ಚಾಸಾ–1 ರವರು ಪರಿಶಿಷ್ಟ ಜಾತಿಯ ಸದಸ್ಯರು ಎಂದು ಗೊತ್ತಿದ್ದರೂ ಈ ತರಹ ಅಪರಾಧ ಮಾಡಿ ಕಲಂಃ 3(2)(VA) ಎಸ್ ಸಿ ಎಸ್ ಟಿ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ..

ಆರೋಪಿಯಾದ ನೀವು ಮೇಲಿನ ಆರೋಪಗಳಿಗಾಗಿ ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕ **04.08.2025**

ಅಧಿಕ ಜಿಲ್ಲಾ ಮತ್ತು ವಿಶೇಷ ನ್ಯಾಯಾಧೀಶರು,
ಹಾಸನ.

# **<u>ಅಧಿಕ ಜಿಲ್ಲಾ ಮತ್ತು ವಿಶೇಷ  ನ್ಯಾಯಾಲಯ  ಹಾಸನ ಇವರಲ್ಲಿ</u>**

## **ಸ್ಪೇಷಲ್.ಸಿ ನಂಃ  <u>425/2023</u>**

<u>ಪಿರ್ಯಾದಿಃ</u>  ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿ
ಆರಕ್ಷಕ  ಉಪ ಆಧೀಕ್ಷಕರು
ಹೊಳೆನರಸೀಪುರ ಉಪ ವಿಭಾಗ.

ವಿರುದ್ಧ

<u>ಆರೋಪಿ</u>  ವಿಶ್ವನಾಥ ಬಿನ್ ಸ್ವಾಮಿಗೌಡ,

**<u>ಆರೋಪಿಯ ಉತ್ತರ</u>**

ಪ್ರಶ್ನೆಃ 01  ಈಗ  ಓದಿ ಹೇಳಿ ವಿವರಿಸಿದ ಆರೋಪಣೆಯನ್ನು ಕೇಳಿದೆಯಾ ಮತ್ತು ಅರ್ಥ ಆಗಿದೆಯಾ?

ಉತ್ತರಃ  ತಿಳಿದಿದೆ ಮತ್ತು ಅರ್ಥ ಆಗಿದೆ.

ಪ್ರಶ್ನೆಃ 02  ಆರೋಪಣೆಯನ್ನು ಒಪ್ಪಿಕೊಳ್ಳುವಿಯೋ ಅಥವಾ ವಿಚಾರಣೆಯಾಗ ಬಯಸುವೆಯೋ?

ಉತ್ತರಃ  ದೋಷಾರೋಪಣೆ ಒಪ್ಪುವುದಿಲ್ಲ ಮತ್ತು ವಿಚಾರಣೆಯಾಗಬೇಕು.

ದಿನಾಂಕ  04.08.2025

ಅಧಿಕ ಜಿಲ್ಲಾ ಮತ್ತು ವಿಶೇಷ ನ್ಯಾಯಾಧೀಶರು,
ಹಾಸನ.